ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿನ ಪ್ರಯಾಣಿಕರ ಸಂಚಾರ-ಸಂಚಕಾರವಾಗಿ ಪರಿಣಮಿಸಿದೆ!

• ಪ್ರಜಾವಾಹಿನಿ-ಕುಣಿಗಲ್, ಎಂ. ಡಿ. ಮೋಹನ್

ತಾಲ್ಲೂಕು ಕೇಂದ್ರದಿಂದ ರಾಜಧಾನಿ ಬೆಂಗಳೂರಿಗೆ ಹೋಗುವ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ಸುಗಳ ಅಸಮರ್ಪಕ ಸಂಚಾರ ವ್ಯವಸ್ಥೆ ಹಾಗೂ ಬಸ್ಸುಗಳ ಕೊರತೆಯಿಂದ ನಿತ್ಯ ನಿರಂತರ ಪ್ರಯಾಣಿಕರು ಬಸ್ಸಿನಲ್ಲಿ ಕೂರಲು ಆಸನ ಸಿಗದೆ, ನಿಲ್ಲಲು ಸ್ಥಳವಿಲ್ಲದೆ, ನೂಕು ನುಗ್ಗಲು ಕಿರಿಕಿರಿಯಲ್ಲಿ ನೊಂದು-ಬೆಂದು ಪರದಾಡುವ ಮೂಲಕ ಅಸಮದಾನ ವ್ಯಕ್ತಪಡಿಸುತ್ತಲೇ ಆಡಳಿತ ವ್ಯವಸ್ಥೆಯ ವಿರುದ್ಧ ಹಿಡಿ ಶಾಪ ಹಾಕುತ್ತಿದ್ದಾರೆ.

ಕುಣಿಗಲ್ ಪಟ್ಟಣ ತಾಲೂಕು ಕೇಂದ್ರವಾಗಿದ್ದು ರಾಜಧಾನಿ ಬೆಂಗಳೂರು ಕೇಂದ್ರದಿಂದ ಕೇವಲ 75 ಕಿ.ಮೀ ದೂರ ಇರುವುದಿಂದ ದಿನನಿತ್ಯ ಸಹಸ್ರಾರು ಸಂಖ್ಯೆಯಲ್ಲಿ ನಾಗರಿಕರು ತಮ್ಮ ವ್ಯವಹಾರವನ್ನು ಬೆಂಗಳೂರಿಗೆ ಹೋಗಿ ವ್ಯವಹರಿಸುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ.

ಬೆಂಗಳೂರು ಮಂಗಳೂರು ರಾಜ್ಯ ಹೆದ್ದಾರಿಯ ಮಧ್ಯದಲ್ಲಿ ಬರುವಂತಹ ಕುಣಿಗಲ್ ತಾಲೂಕು ಬಹಳಷ್ಟು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಿಗೆ ಸಂಪರ್ಕ ನೀಡುವ ಕೇಂದ್ರವಾಗಿದ್ದು ಪ್ರೇಕ್ಷಣೀಯ ಸ್ಥಳ ಮಂಡ್ಯ, ಮೈಸೂರಿಗೂ ಈ ಮಾರ್ಗ ಮೂಲಕವೇ ಸಂಚರಿಸಲು ನಾಗರಿಕರು ಈ ಮಾರ್ಗವನ್ನು ಬಳಸುತ್ತಿದ್ದಾರೆ.

ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರ ದೂರ ದೃಷ್ಟಿ ಚಿಂತನೆಯ ಫಲವಾಗಿ ಬೆಂಗಳೂರು ಮಂಗಳೂರಿಗೆ ರೈಲು ಸಂಪರ್ಕ ಮಾರ್ಗ ನಿರ್ಮಿಸಿದ್ದು ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕಾಮಗಾರಿಯಲ್ಲಿ ರೈಲು ಸಂಚರಿಸಲು ಕಳೆದ 13 ವರ್ಷಗಳಿಂದೆಯೇ ಪ್ರಾರಂಭವಾಗಿದ್ದು ರೈಲು ಮಾರ್ಗ ಸಂಚಾರಗೊಂಡ ನಂತರ ಬಸ್ ಮಾರ್ಗದ ವ್ಯವಸ್ಥೆಯಲ್ಲಿ ಪ್ರಯಾಣಿಕರು ನೂಕು ನುಗ್ಗಲು ಇಲ್ಲದೆ ವ್ಯವಸ್ಥಿತವಾಗಿ ಸಂಚರಿಸಬಹುದು ಎಂಬುದು ಬಹುತೇಕರ ಚಿಂತನೆಯಾಗಿತ್ತು. ರೈಲು ಮಾರ್ಗ ಪ್ರಾರಂಭವಾಗಿ 13 ವರ್ಷ ಕಳೆದರೂ ಸಹ ರಸ್ತೆ ಮಾರ್ಗದಲ್ಲಿ ಸಂಚರಿಸುವ ಬಸ್ಸುಗಳ ಕೊರತೆಯಿಂದ ಮತ್ತು ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಣೆ ಯಾದಗಿನಿಂದ ಬಸ್‌ಗಳಲ್ಲಂತು ಕಿಕ್ಕಿರಿದು ಪ್ರಯಾಣಿಕರು ತುಂಬಿ ಕೊಳ್ಳುವುದರಿಂದ ಸಂಚಾರಕ್ಕೆ ಸಂಚಕಾರವನ್ನು ತಂದಂತಾಗಿದೆ.

ವಾರದ ರಜೆಯಲ್ಲಿ ಬಸ್ಸುಗಳಲ್ಲಿ ವಿಪರೀತ ಜನಸಂದಣಿ

ಹಬ್ಬ ಹರಿದಿನ ವಾರದ ರಜೆಯ ಸಮಯದಲ್ಲಿ ಗ್ರಾಮೀಣ ಪ್ರದೇಶದಿಂದ ಉದ್ಯೋಗಹರಸಿ ಬೆಂಗಳೂರಿಗೆ ಹೋಗಿದ್ದ ಮಂದಿ ಎರಡು ಮೂರು ದಿನಗಳು ರಜೆ ಇದ್ದರೆ ಸಾಕು ಮರಳಿ ತಮ್ಮ ಗ್ರಾಮಗಳಿಗೆ ಬರುವುದು ಸಾಮಾನ್ಯ. ಬಹುತೇಕವಾಗಿ ಬಂದಂತಹ ಜನರೆಲ್ಲರೂ ಪುನಃ ತಮ್ಮ ಕೆಲಸಗಳಿಗೆ ತೆರಳಲು ಭಾನುವಾರ ಸಂಜೆಗೆ ತುದಿಗಳಲ್ಲಿ ಹೊರಟು ನಿಲ್ಲುತ್ತಾರೆ. ಇದರಿಂದ ಶನಿವಾರ ಸಂಜೆ ಭಾನುವಾರ ಮಧ್ಯಾಹ್ನ ಸೋಮವಾರ ಬೆಳಿಗ್ಗೆ ವಿಪರೀತವಾಗಿ ಬಸ್ಸುಗಳಲ್ಲಿ ಪ್ರಯಾಣಿಕರು ತುಂಬಿ ಕೊಳ್ಳುವುದರಿಂದ ಶಕ್ತಿಯುತವಾದ ಮನುಷ್ಯರು ಮಾತ್ರ ಸಂಚರಿಸಲು ಸಾಧ್ಯ.

ವಯೋವೃದ್ಧರು, ವಿಕಲಚೇತನರು, ಮಹಿಳೆಯರು, ಮಕ್ಕಳು ಅಂದು ಮಾತ್ರ ಬಸ್ ಸಂಚಾರ ಮಾಡಲು ಬಾರಿ ಪ್ರಯಾಸ ಪಡಬೇಕಾಗುತ್ತದೆ. ಇವರಂತೂ ನೊಂದು ಬೆಂದು ಆಡಳಿತ ವ್ಯವಸ್ಥೆಗೆ ಇಡೀ ಶಾಪ ಹಾಕುತ್ತಾ ಪಟ್ಟಣದ ಹುಚ್ಚ ಮಾಸ್ತಿಗೌಡ ವೃತ್ತದಲ್ಲಿ ಬಸ್ಸುಗಳಿಗಾಗಿ ದಿನಪೂರ್ತಿ ಪ್ರಯಾಸದಿಂದ ಮಳೆಯಲ್ಲಿ ನೆಂದು ಬಿಸಿಲಲ್ಲಿ ಒಣಗಿ ನಿಂತು ನಿಂತು ಸಾಕಾಗಿ ಸಂಪೂರ್ಣ ಆಡಳಿತ ವ್ಯವಸ್ಥೆಗೆ ಹಿಡಿ ಶಾಪ ಹಾಕುತ್ತಲೇ ಬಸ್‌ಗಳನ್ನು ಕಾಯುತ್ತಾ ಕಾಟಾಚಾರಕ್ಕೆ ಇರುವ ತಂಗುದಾಣದಲ್ಲಿ ಕೂರಲು ಆಗದೆ ಗಂಟೆಗಟ್ಟಲೆ ಬಸ್ ಗಳಲ್ಲಿ ಕಾದು ಸುಸ್ತಾಗಿ ಮನನೊಂದು ಬೇಸರದಿಂದಲೇ ಆಡಳಿತ ವ್ಯವಸ್ಥೆಯ ವಿರುದ್ಧ ಪ್ರಯಾಣಿಕರು ಹಿಡಿ ಶಾಪ ಹಾಕುವುದು ಮಾಮೂಲಿಯಾಗಿದೆ.

ಮೊಬೈಲ್, ಬ್ಯಾಗ್, ಚಿನ್ನ ಅಪಹರಣ ಕಳ್ಳರ ಕಾಟ

ಒಂದು ಕಡೆ ಬಸ್ಸು ಬರಲಿಲ್ಲ ಎನ್ನುವ ಬೇಸರ ಬಂದರು ಕೂರಲು ಸೀಟು ಸಿಗದೆ ಇರುವುದು ಒಂದು ರೀತಿಯ ಸಮಸ್ಯೆ. ಆದರೆ ಇದೇ ಕೊರಗಿನಲ್ಲಿದ್ದಾಗಲೇ ಕೈನಲ್ಲಿದ್ದ ಮೊಬೈಲ್, ಕೂಡಿಟ್ಟಿದ್ದ ಸಣ್ಣ ಪುಟ್ಟ ಚಿನ್ನ, ನಗದು ಹಣ ಕಾಣೆಯಾಗುವ ಮೂಲಕ ಪ್ರಯಾಣಿಕರ ಗೋಳು ಕೇಳುವರೇ ಇಲ್ಲದಂತಾಗಿದೆ. ಇತ್ತೀಚೆಗಷ್ಟೇ ಅಮೃತೂರು ಭಾಗದ ಮಹಿಳೆ ಒಬ್ಬಳು ಬೆಂಗಳೂರಿನಲ್ಲಿ ಮನೆ ಖರೀದಿಸಲು ತನ್ನ ಒಡವೆಯನ್ನೆಲ್ಲ ಬ್ಯಾಂಕಿನಲ್ಲಿಟ್ಟಿದ್ದು ಬ್ಯಾಂಕಿನಿಂದ ಬೆಂಗಳೂರಿಗೆ ಸಾಗಿಸುವ ಮಧ್ಯೆ ಇಡೀ ಬ್ಯಾಗು ಸಮೇತ ಕದ್ದು ಪರಾರಿಯಾಗಿದ್ದು ಮತ್ತೊಬ್ಬ ಯುವಕ ಮತ್ತು ಯುವತಿಯರ ಮೊಬೈಲ್ ಕಳ್ಳತನವಾಗಿದ್ದು ಸೇರಿದಂತೆ ಪಿಕ್‌ಪ್ಯಾಕೆಟ್ ಕಳ್ಳರ ಕಾಟವು ಒಂದು ಕಡೆ ಹೆಚ್ಚಾಗಿದ್ದು ಪೊಲೀಸರು ಎಚ್ಚೆತ್ತುಕೊಂಡಾಗ ಮತ್ತೆ ಮತ್ತೆ ಮರೆಸಿ ಕಳ್ಳತನ ಮಾಡುವ ಜಾಣ ಕಳ್ಳರು ಹೆಚ್ಚಾಗುತ್ತಿರುವುದು ವಿಪರ್ಯಾಸ. ಈ ಬಗ್ಗೆ ಗೋಳಾಡುತ್ತಾ ಪೊಲೀಸರ ಬಳಿ ನೋವು ತೋಡಿಕೊಳ್ಳುತ್ತಲೆ ಗೋಳಾಡುವುದು ಸಾಮಾನ್ಯವಾಗಿದೆ.

ಇನ್ನೂ ಬೆಂಗಳೂರಿನಿಂದ ಕುಣಿಗಲ್ ಕಡೆಗೆ ಪ್ರಯಾಣ ಬೆಳೆಸಿ ಕೈಯಲ್ಲಿ ಲಗೇಜ್ ಹಿಡಿದು ಮಕ್ಕಳನ್ನು ಹೊತ್ತು ಇನ್ನೇನು ಸಕಲೇಶಪುರ, ಹಾಸನ, ಚಿಕ್ಕಮಂಗಳೂರು, ಧರ್ಮಸ್ಥಳ, ಅಥವಾ ಮಂಗಳೂರು ಬಸ್ಸಿಗೆ ಹತ್ತಲು ಹೋದ ಪ್ರಯಾಣಿಕರಿಗೆ ಬಹುತೇಕ ನಿರ್ವಾಹಕರು ಬಾಗಿಲಿನಲ್ಲಿಯೇ ತಡೆದು ಅಯ್ಯೋ ಈ ಬಸ್ಸು ಹೋಗುವುದಿಲ್ಲ. ಬೈಪಾಸಿನಲ್ಲಿ ಹೋಗುತ್ತದೆ ಎಂದೆಲ್ಲ ಸುಳ್ಳು ಹೇಳುವ ಮೂಲಕ ಈ ಭಾಗದ ಪ್ರಯಾಣಿಕರನ್ನು ಬಸ್ಸಿಗೆ ಹತ್ತಿಸಿಕೊಳ್ಳದೆ ರಾತ್ರಿಯೆಲ್ಲಾ ಬಸ್ಸಿಗಾಗಿ ಪರದಾಡುವ ಸ್ಥಿತಿ ತಂದೊಡ್ಡುತ್ತಾರೆ. ಎಷ್ಟೋ ಪ್ರಯಾಣಿಕರು ನೊಂದು ಬೇಸರ ವ್ಯಕ್ತಪಡಿಸುತ್ತಾ ಬಹಳ ನೊಂದು ಹಿಡಿ ಶಾಪ ಹಾಕುತ್ತಿರುವುದು ಮಾಮೂಲಿಯಾಗಿದೆ. ಈ ಬಗ್ಗೆ ತಾಲೂಕಿನ ಶಾಸಕರು ಸೇರಿದಂತೆ ಅಧಿಕಾರಿಗಳು ಗಮನಹರಿಸುವಂತೆ ಒತ್ತಾಯಿಸುತ್ತಿದ್ದಾರೆ.

ಬಹು ದಿನಗಳ ನಾಗರಿಕರ ಬೇಡಿಕೆಯಂತೆ ತಾಲೂಕು ಕೇಂದ್ರದಿಂದ ಬೆಂಗಳೂರಿಗೆ ಹೋಗಲು ಈಗಿರುವ ಬಸ್ಸುಗಳನ್ನು ಹೆಚ್ಚಿಸಿ ಅನುಕೂಲ ಮಾಡಿಕೊಡುವಂತೆ ಹಲವು ನಾಗರಿಕರ ಒತ್ತಾಯವಾಗಿದ್ದು ಸ್ಥಳೀಯವಾಗಿರುವ ಡಿಪೋ ವ್ಯವಸ್ಥಾಪಕರಿಗೂ ಗಮನಕ್ಕೆ ತಂದರು ಸಹ ಪ್ರಯೋಜನವಾಗಿಲ್ಲ. ಇನ್ನು ಮುಂದಾದರೂ ಭಾನುವಾರ ಮಧ್ಯಾಹ್ನ, ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ಹೋಗುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ತಾಲೂಕು ಕೇಂದ್ರದಿಂದ ಬಸ್ಸುಗಳ ವ್ಯವಸ್ಥೆ ಮಾಡುವಂತೆ ಶಾಸಕರು ಸೇರಿದಂತೆ ತಾಲೂಕು ಆಡಳಿತ ವ್ಯವಸ್ಥೆ ಗಮನಹರಿಸಬೇಕೆಂಬುದು ಬಹುತೇಕ ಸಾರ್ವಜನಿಕರ ಒತ್ತಾಸೆಯಾಗಿದೆ. ಇನ್ನಾದರೂ ವಯೋ ವೃದ್ಧರಿಗೆ, ವಿಕಲಚೇತನರಿಗೆ, ಮಹಿಳೆಯರು ಮಕ್ಕಳ ವ್ಯವಸ್ಥಿತ ಸುಗಮ ಸಂಚಾರಕ್ಕೆ ಆಡಳಿತ ವ್ಯವಸ್ಥೆ ಮುಂದಾಗುತ್ತದೆಯೇ ಎಂದು ಕಾದು ನೋಡಬೇಕಿದೆ!

> ಬಹುತೇಕ ಸಾರ್ವಜನಿಕರು ಇಂದು ಬೆಂಗಳೂರನ್ನೇ ಎಲ್ಲಾ ರೀತಿಯ ವ್ಯವಹಾರಿಕವಾಗಿ ಅವಲಂಬಿಸಿರುವುದರಿಂದ ಸಂಚಾರದ ವ್ಯವಸ್ಥೆ ಹೆಚ್ಚಾಗುತ್ತಿದೆ. ಬೆಂಗಳೂರಿನ ಕಡೆಯಿಂದ ಕುಣಿಗಲ್‌ಗೆ ಬರಲು ಬಹಳ ತೊಂದರೆಯಾಗಿದೆ. ಕಂಡಕ್ಟರ್‌ಗಳು ಏಕವಚನದಲ್ಲಿಯೇ ಮಾತನಾಡುತ್ತಾ ಬಸ್ಸಿಗೆ ಹತ್ತಿಸುವುದೇ ಇಲ್ಲ. ಅಲ್ಲದೆ ಅದೇ ರೀತಿಯಲ್ಲಿಯೇ ಸಮಯಕ್ಕೆ ಸರಿಯಾಗಿ ಸಂಚಾರ ವ್ಯವಸ್ಥೆ ಸೇರಿದಂತೆ ಬಸ್ಸುಗಳ ವ್ಯವಸ್ಥೆ ಮಾಡಿದರೆ ಸಮಸ್ಯೆ ತಗ್ಗಿಸಬಹುದು.
>
> -ಪ್ರಯಾಣಿಕ ಶ್ರೀನಿವಾಸ್ ಪ್ರೆಸ್

> ಉದ್ಯೋಗವನ್ನರಸಿ ಬೆಂಗಳೂರಿಗೆ ಸೇರಿರುವಂತಹ ಬಹುತೇಕರು ರಜೆ ದಿನಗಳ ತಮ್ಮ ಹಳ್ಳಿಗಳಿಗೆ ಆಗಮಿಸುತ್ತಾರೆ ಮತ್ತೆ ಮರಳುವಾಗ ಬಸ್ಸುಗಳ ಕೊರತೆ ಹೆಚ್ಚಾಗುತ್ತಿದೆ ಅಲ್ಲದೆ ಉಚಿತ ಪ್ರಯಾಣವು ಸಹ ವಿದ್ಯಾರ್ಥಿಗಳಿಗೂ ಉದ್ಯೋಗಿಗಳಿಗೂ ಸರಿಯಾದ ಸಮಯಕ್ಕೆ ಕಾಲೇಜಿಗೂ ಫ್ಯಾಕ್ಟರಿಗಳಿಗೂ ಕಚೇರಿಗಳಿಗೂ ಹೋಗಲಾಗದೆ ಸಮಸ್ಯೆಗೆ ಸಿಲುಕುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.
>
> – ಶಿವರಾಜ್, ಉದ್ಯೋಗಿ

ಪಶು ಚಿಕಿತ್ಸಾ ಕೇಂದ್ರ ನಿರ್ಮಾಣಕ್ಕೆ ಭೂಮಿಪೂಜೆ

• ಪ್ರಜಾವಾಹಿನಿ-ಹೊಸಕೋಟೆ

ಹೊಸಕೋಟೆ ತಾಲೂಕು ನಂದಗುಡಿ ಹೋಬಳಿ ಎನ್.ಹೊಸಹಳ್ಳಿ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಸುಮಾರು 50 ಲಕ್ಷ ರೂ. ವೆಚ್ಚದಲ್ಲಿ ಪಶು ಚಿಕಿತ್ಸಾ ಕೇಂದ್ರ ನಿರ್ಮಿಸುವ ಕಾಮಗಾರಿಯ ಭೂಮಿ ಪೂಜೆಯನ್ನು ಹೊಸಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರು ಶರತ್ ಬಚ್ಚೇಗೌಡರು ನೆರವೇರಿಸಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರು ರಾಜಶೇಖರ್ ಗೌಡರು, ಬೋಧನಹಳ್ಳಿ ಪ್ರಕಾಶ್, ಉಪನಿರ್ದೇಶಕರಾದ ಜಗದೀಶ್, ತಾಲೂಕು ಪಂಚಾಯಿತಿ ಮುಖ್ಯ ನಿರ್ವಹಣಾಧಿಕಾರಿಗಳು ನಾರಾಯಣಸ್ವಾಮಿ ಹಾಗೂ ಹೋಬಳಿ ಮುಖಂಡರು ಅಧ್ಯಕ್ಷರು ಸದಸ್ಯರು ಗ್ರಾಮಸ್ಥರು ಹಾಗೂ ಮುಖಂಡರು ಶಾಸಕರೊಂದಿಗಿದ್ದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಮಾತನಾಡಿ ನಮ್ಮ ಗ್ರಾಮದಲ್ಲಿ ಹೈನುಗಾರಿಕೆಯನ್ನು ನಂಬಿಕೊಂಡು ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ತಾಲೂಕಿನಲ್ಲಿಯೇ ಹೆಚ್ಚು ಹಾಲು ಕೊಡುವ ಗ್ರಾಮ ಎನ್.ಹೋಸಹಳ್ಳಿ ಬಹು ದಿನಗಳ ಬೇಡಿಕೆಯ ಕನಸು ನನಸಾಗಿದ್ದು ಈ ದಿನ ಸುದಿನವಾಗಿದೆ.

ಸುತ್ತಮುತ್ತಲಿನ ಗ್ರಾಮಸ್ಥರು ಪಶು ಚಿಕಿತ್ಸಾ ಕೇಂದ್ರ ನಿರ್ಮಾಣವಾಗುತ್ತಿರುವುದು ಎಲ್ಲಾ ರೈತರಿಗೂ ಅನುಕೂಲವಾಗಲಿದೆ. ಹೊಸಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಶರತ್ ಬಚ್ಚೇಗೌಡರು ಪಶು ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತೇವೆಂದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಮುಖಂಡರು ಉಪಸ್ಥಿತರಿದ್ದರು.

ಸರ್ಕಾರದ ಅನುದಾನಗಳು ಸದ್ಬಳಕೆಯಾಗಬೇಕು: ಮಂಜು

• ಪ್ರಜಾವಾಹಿನಿ-ಕೆ.ಆರ್.ಪೇಟೆ

ಗ್ರಾಮಗಳ ಅಭಿವೃದ್ಧಿಯಾಗಬೇಕಾದರೆ ಸರ್ಕಾರ ನೀಡಿದ ಅನುದಾನಗಳ ಸದ್ಬಳಕೆಯಾಗಬೇಕು ಎಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು.

ಅವರು ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಮೂಲಕ ಸ್ಥಳೀಯ ಶಾಸಕರ ಅಭಿವೃದ್ಧಿ ನಿಧಿ ಅಡಿಯಲ್ಲಿ ಆರಂಭಗೊಳ್ಳುತ್ತಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಅಕ್ಕಿಹೆಬ್ಬಾಳು ಹೋಬಳಿಯ ಸೋಮನಹಳ್ಳಿ ಗ್ರಾಮದಲ್ಲಿ 50 ಲಕ್ಷ, ದುಡುಕನಹಳ್ಳಿ ಗ್ರಾಮದಲ್ಲಿ 30 ಲಕ್ಷ, ಹೊನ್ನೇನಹಳ್ಳಿ ಗ್ರಾಮದಲ್ಲಿ 25 ಲಕ್ಷ ಮತ್ತು ಪುರ ಗ್ರಾಮದಲ್ಲಿ 10 ಲಕ್ಷ ಸೇರಿ ಒಟ್ಟು 1.15 ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ಮಾಡುವ ಮೂಲಕ ಚಾಲನೆ ನೀಡಿದ ಶಾಸಕ ಹೆಚ್.ಟಿ.ಮಂಜು ಸರ್ಕಾರ ನೀಡಿದ ಅನುದಾನವನ್ನು ಬಳಕೆ ಮಾಡಿಕೊಂಡು ಗುಣಮಟ್ಟದ ಕಾಮಗಾರಿ ನಡೆಸಬೇಕು. ಗುಣಮಟ್ಟದ ಕಾಮಗಾರಿಯಲ್ಲಿ ಯಾವುದೇ ರೀತಿಯ ಲೋಪವಾಗದಂತೆ ಎಚ್ಚರ ವಹಿಸುವಂತೆ ಕಾಮಗಾರಿ ಏಜೆನ್ಸಿಯವರಿಗೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ನಾನು ಈಗಾಗಲೇ ಕಟ್ಟು ನಿಟ್ಟಿನ ಸೂಚನೆ ನೀಡಿದ್ದೇನೆ. ಗುಣಮಟ್ಟದ ಕಾಮಗಾರಿಯಲ್ಲಿ ಯಾವುದೇ ರೀತಿಯ ರಾಜಿ ಸಲ್ಲದು. ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ ಗ್ರಾಮೀಣ ಪ್ರದೇಶದ ರಸ್ತೆ ಮತ್ತು ಚರಂಡಿಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ತಂದಿದ್ದೇನೆ.

ತಮ್ಮ ತಮ್ಮ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಗ್ರಾಮಸ್ಥರು ಎಚ್ಚರ ವಹಿಸಬೇಕು. ಪಿ.ಡಿ.ಓ ಗಳು ಮತ್ತು ಗ್ರಾಮ ಪಂಚಾಯತಿ ಸದಸ್ಯರು ಕಾಮಗಾರಿಯ ಮೇಲೆ ನಿಗಾವಹಿಸಿ ಲೋಪವಾಗದಂತೆ ನೋಡಿಕೊಳ್ಳುವಂತೆ ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಟಿ.ಎ.ಪಿ.ಸಿ.ಎಂ.ಎಸ್ ಉಪಾಧ್ಯಕ್ಷ ಸೋಮನಹಳ್ಳಿ ಜಿ.ಮೋಹನ್, ತಾಲೂಕು ಪಂಚಾಯತಿ ಮಾಜಿ ಸದಸ್ಯ ಮಾಂಬಳ್ಳಿ ಅಶೋಕ್, ಮಾಂಬಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕಾಂತರಾಜು,ಮುಖಂಡರಾದ ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಲೋಕೇಶ್, ಸೋಮನಹಳ್ಳಿ ಪುಟ್ಟಸ್ವಾಮಿಗೌಡ ಬೋಜರಾಜು, ಜೈನಹಳ್ಳಿ ದಿನೇಶ್, ಶಾಸಕರ ಆಪ್ತ ಸಹಾಯಕರಾದ ಅರಳಕುಪ್ಪೆ ಪ್ರತಾಪ್, ಧ್ರುವಕುಮಾರ್ ಸೇರಿದಂತೆ ಜಿ.ಪಂ ಅಧಿಕಾರಿಗಳು ಮತ್ತು ಆಯಾ ಬಾಗದ ಪಿ.ಡಿ.ಒಗಳು ಉಪಸ್ಥಿತರಿದ್ದರು.

ಬೆಂ.ಗ್ರಾ ಜಿಲ್ಲೆಗೆ ಪ್ರವಾಸ ಕೈಗೊಳ್ಳುವ ಪ್ರವಾಸಿಗರಿಗೆ ದಿನದ ಪ್ಯಾಕೇಜ್ ಟೂರ್

• ಪ್ರಜಾವಾಹಿನಿ-ಬೆಂ.ಗ್ರಾಂ.ಜಿಲ್ಲೆ.

ಪ್ರವಾಸೋದ್ಯಮ ಇಲಾಖೆ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ತಾಣಗಳಾದ ದೇವನಹಳ್ಳಿ ತಾಲ್ಲೂಕಿನ ಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಚಿಕ್ಕ ಮಧುರೆಯ ಶನಿ ಮಹಾತ್ಮ ದೇವಸ್ಥಾನ, ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ಗಂಗಾಧರೇಶ್ವರ ಸ್ವಾಮಿ ಮತ್ತು ಹೊನ್ನಾದೇವಿ ದೇವಸ್ಥಾನಗಳನ್ನು ಒಳಗೊಂಡ ಪ್ರವಾಸಿ ತಾಣಗಳಿಗೆ ಬೆಂಗಳೂರು ಗ್ರಾಮಾಂತರ ಪ್ರವಾಸ(ಬಿ.ಆರ್.ಟಿ), ವ್ಯವಸ್ಥಿತ ಪ್ರವಾಸವನ್ನು ಕೆ.ಎಸ್.ಡಿ.ಟಿ.ಸಿ ನಿಗಮದಿಂದ ಆಯೋಜನೆ ಮಾಡಲಾಗಿದ್ದು, ಆಸಕ್ತ ಪ್ರವಾಸಿಗರು ಆನ್ಲೈನ್ ಮೂಲಕ ಬುಕಿಂಗ್ ಮಾಡಬಹುದಾಗಿದೆ.

ಪ್ರತೀ ದಿನ ಯಶವಂತಪುರ ಕೆಎಸ್ಟಿಡಿಸಿ ಕಚೇರಿಯಿಂದ ಬೆಳಿಗ್ಗೆ 7 ಗಂಟೆಗೆ ಬಸ್ ತೆರಳಿ ಸುಮಾರು 8:30 ಕ್ಕೆ ದೇವನಹಳ್ಳಿ ಕೋಟೆಗೆ ತಲುಪುತ್ತದೆ, 10 ಗಂಟೆಗೆ ಘಾಟಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ, 11:45ಕ್ಕೆ ಚಿಕ್ಕ ಮಧುರೆ ಹಾಗೂ ಶನಿ ಮಹಾತ್ಮ ದೇವಸ್ಥಾನಕ್ಕೆ, ಮಧ್ಯಾಹ್ನದ ಊಟದ ಸಮಯ 1:30 ರಿಂದ 2 ಗಂಟೆಯವರೆಗೆ. 2:30 ಕ್ಕೆ ಶಿವಗಂಗೆಯ ಗಂಗಾಧರೇಶ್ವರ ಮತ್ತು ಹೊನ್ನಾದೇವಿ ದೇವಾಲಯಕ್ಕೆ, ಕೊನೆಯದಾಗಿ 6 ಗಂಟೆಗೆ ಯಶವಂತಪುರ ಕೆಎಸ್ಟಿಡಿಸಿ ಕಚೇರಿಗೆ ವಾಪಸ್ಸಾಗುವುದು. ಒಂದು ದಿನದ ಪ್ಯಾಕೇಜ್ ಟೂರ್ ಒಬ್ಬರಿಗೆ 830 ರೂ.ಗಳು.

ಆಸಕ್ತ ಪ್ರವಾಸಿಗರು ಕೆ.ಎಸ್.ಡಿ.ಟಿ.ಸಿ ಯ ಅಧಿಕೃತ ಜಾಲತಾಣವಾದ ತಿತಿತಿ.ಞಣಜಛಿ.ಛಿಠ ಮುಖಾಂತರ ಟಿಕೆಟ್ ಬುಕ್ ಮಾಡಿಕೊಳ್ಳಬಹುದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-43344334/8970650070 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಲು ಉತ್ಪಾದಕರ ಒಕ್ಕೂಟದ ಚುನಾವಣೆ : ಬಿಜೆಪಿಗೆ ಮತ ನೀಡುವಂತೆ ಮನವಿ

• ಪ್ರಜಾವಾಹಿನಿ-ಮಾಲೂರು

ಕೋಟ್ಯಂತರ ರೂಗಳು ಬೆಲೆ ಬಾಳುವ ಸರ್ಕಾರಿ ಗೋಮಾಳ ಜಮೀನಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮಾಡಿಕೊಂಡು ಜಮೀನುಗಳನ್ನು ಪರಬಾರೆ ಮಾಡುತ್ತಿದ್ದಾರೆ. ಯಾರಾದರೂ ಪ್ರಶ್ನಿಸಿದರೆ ಅವರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಇಡುತ್ತಾರೆ ಎಂದು ಮಾಜಿ ಶಾಸಕ ಕೆ.ಎಸ್ ಮಂಜುನಾಥ್ ಗೌಡ ಹೇಳಿದರು.

ಅವರು ನಗರದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೀತ ನಾಯಕನಹಳ್ಳಿ ಗ್ರಾಮದ ಬಳಿ ಗೋಮಾಳ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮನೆಯಲ್ಲಿಟ್ಟುಕೊಂಡು ದಾಖಲೆಗಳು ಇಲ್ಲವೆಂದು ಮಿಸ್ಸಿಂಗ್ ದಾಖಲೆ ಸೃಷ್ಟಿಸಿ ಜಮೀನನ್ನು ಪರಭಾರೆ ಮಾಡಿದ್ದಾರೆ. ಇತ್ತೀಚಿಗೆ ನಡೆದ ಬ್ಯಾಂಕ್ ಚುನಾವಣೆಯಲ್ಲಿ ನಮ್ಮ ಪಕ್ಷದವರ ಮೇಲೆ ದೌರ್ಜನ್ಯದ ಮಾತುಗಳನಾಡಿದ್ದಾರೆ.

ಕಾಂಗ್ರೆಸ್ ಪಕ್ಷದ ಸರ್ಕಾರದಲ್ಲಿ ಶಾಸಕರು ಎಷ್ಟು ಬೇಕಾದರೂ ಲೂಟಿ ಮಾಡಿದರು ಪೊಲೀಸ್ ಠಾಣೆ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದರೆ ಯಾವುದೇ ಪ್ರಯೋಜನವಾಗುತ್ತಿಲ್ಲ. ತಾಲೂಕಿನಲ್ಲಿ ಭ್ರಷ್ಟಾಚಾರ ತುಂಬಿ ಹೋಗಿದೆ. ಪೊಲೀಸ್ ಇಲಾಖೆಯನ್ನು ಅಕ್ರಮವಾಗಿ ಜನರನ್ನು ಬೆದರಿಸಲು ಬಳಸಿಕೊಳ್ಳುತ್ತಿದ್ದಾರೆ.

ಒಕ್ಕೂಟದ ಅಧ್ಯಕ್ಷರಾಗಿ ರೈತರ ಹಣ ತಿಂದರೆ ಅವರ ಕುಟುಂಬ ಸರ್ವನಾಶವಾಗುತ್ತದೆ ಎಂದು ಸಭೆಗಳಲ್ಲಿ ಹೇಳುತ್ತಾರೆ. ಆದರೆ ಕೋಟ್ಯಂತರ ರೂಗಳನ್ನು ನುಂಗಿ ನೀರು ಕುಡಿದಿದ್ದಾರೆ. ಅವರ ಸ್ವಪಕ್ಷದವರು ಆದ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರು ಒಕ್ಕೂಟದ ಒಳಗೆ ಹೋಗದಂತೆ ತೊಂದರೆ ಕೊಟ್ಟರು. ಈ ಹಿಂದೆ 129 ಎಕರೆ ಜಮೀನನ್ನು ಜಿಲ್ಲಾ ಉಪ ವಿಭಾಗ ಅಧಿಕಾರಿಗಳಾದ ಸೋಮಶೇಖರ್ ಅವರ ಅವಧಿಯಲ್ಲಿ ಅವರ ಗಮನಕ್ಕೆ ತಂದು ಉಳಿಸಲಾಗಿದೆ.

ಇದೇ 28ರಂದು ನಡೆಯಲಿರುವ ಕೋಲಾರ ಹಾಲು ಉತ್ಪಾದಕರ ಒಕ್ಕೂಟದ ಚುನಾವಣೆಯಲ್ಲಿ ಮೂರು ಮಂದಿ ಸ್ಪರ್ಧಿಸಲು ಅವಕಾಶವಿದ್ದು, 18 ಹಾಲು ಉತ್ಪಾದಕ ಡೈರಿಗಳನ್ನು ಸೂಪರ್ ಸೀಡ್ ಮಾಡಿಸಿದ್ದಾರೆ. ಕೋಲಾರ ಹಾಲು ಉತ್ಪಾದಕರ ಒಕ್ಕೂಟದಲ್ಲಿ ನೇಮಕಾತಿಯಲ್ಲಿ ಭ್ರಷ್ಟಾಚಾರ ಮಾಡುವುದರ ಮೂಲಕ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವ ನೈತಿಕತೆ ಇಲ್ಲ. ತಾಲೂಕಿನಲ್ಲಿ ಭ್ರಷ್ಟಾಚಾರವನ್ನು ತೊಡೆದು ಹಾಕಲು ನಾನು ಜನರೊಂದಿಗೆ ಸದಾ ಇರುತ್ತೇನೆ.

ದೇಶದಲ್ಲಿ ಬಿಜೆಪಿ ಪಕ್ಷದ ಸರ್ಕಾರದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಇತ್ತೀಚಿಗೆ ಪಹಲ್ಗಾಂನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಸಿಂಧೂರ ಹೆಸರಿನಲ್ಲಿ ದಾಳಿ ಮಾಡುವ ಮೂಲಕ ಭಯೋತ್ಪಾದಕರನ್ನು ಮಟ್ಟ ಹಾಕುವ ಕೆಲಸ ಮಾಡಿದ್ದಾರೆ.

ಇದೇ 28 ರಂದು ನಡೆಯಲಿರುವ ಕೋಲಾರ ಹಾಲು ಉತ್ಪಾದಕರ ಒಕ್ಕೂಟದ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾಗಿ ಎಟ್ಟಕೋಡಿ ಕೃಷ್ಣಾರೆಡ್ಡಿ ಹಾಗೂ ಡಾ.ಪ್ರಸನ್ನಕುಮಾರ್ ಅವರು ಕಣಕ್ಕೆ ಇಳಿಯಲಿದ್ದಾರೆ. ಪಕ್ಷದ ಮುಖಂಡರು ಕಾರ್ಯಕರ್ತರು ಅವರ ಗೆಲುವಿಗೆ ಶ್ರಮಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಟಿ.ಬಿ.ಕೃಷ್ಣಪ್ಪ, ಗೋಪಾಲ್ ರೆಡ್ಡಿ, ಎಟ್ಟಕೋಡಿ ಕೃಷ್ಣಾರೆಡ್ಡಿ, ಬೆಳ್ಳಾವಿ ಸೋಮಣ್ಣ, ಓಬಳಾಪುರ ಶಂಕರ್, ಜಲಂಧರ್, ಮಡಿವಾಳ ಚಂದ್ರಶೇಖರ್, ಸಾಯಿ ವೆಂಕಟೇಶ್, ಕೆ.ಎನ್. ಜಗದೀಶ್, ರಾಮಕೃಷ್ಣಪ್ಪ, ಆಟೋಮೊಬೈಲ್ ನಂದೀಶ್, ಎಂ.ಎನ್.ನಾಗರಾಜ್, ಪಿ.ವೆಂಕಟೇಶ್, ಇರಬನಹಳ್ಳಿ ಆನಂದ್, ಸೇರಿದಂತೆ ಹಲವಾರು ಮುಖಂಡರು ಹಾಜರಿದರು.

ಇಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ

• ಪ್ರಜಾವಾಹಿನಿ-ಬೆಂ.ಗ್ರಾ.ಜಿಲ್ಲೆ.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ 2025 ರ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ತಾಲ್ಲೂಕು ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ, ದೇವನಹಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಜೂನ್ 12 ರಂದು ಬೆಳಿಗ್ಗೆ 10:00 ಗಂಟೆಗೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಗೌರವಾನ್ವಿತ 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಲಕ್ಷ್ಮಣ ರಾಮು ಕುರಣಿ ಅವರು ನೆರವೇರಿಸಲ್ಲಿದ್ದಾರೆ.

ಘನ ಉಪಸ್ಥಿತಿಯಲ್ಲಿ ಪ್ರದಾನ ಹಿರಿಯ ಸಿವಿಲ್ ನ್ಯಾಯಾಧೀಶರು, ದೇವನಹಳ್ಳಿ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಪ್ರವೀಣ್ ನಾಯಕ್ ವಹಿಸಿಕೊಂಡಿದ್ದಾರೆ.

ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನೆ ಅಧ್ಯಕ್ಷರಾದ ಬಸವರಾಜು ಎ.ಬಿ, ಮುಖ್ಯ ಅತಿಥಿಗಳಾಗಿ ಪ್ರಧಾನ ಸಿವಿಲ್ ನ್ಯಾಯಾಧೀಶರು, ದೇವನಹಳ್ಳಿ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ವೆಂಕಟೇಶ ಎನ್, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನುರಾಧ ಕೆ.ಎನ್. ಜಿಲ್ಲಾ ಪೋಲೀಸ್ ಅಧೀಕ್ಷಕರಾದ ಡಾ. ಸಿ.ಕೆ ಬಾಬ, ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ರಾಮು ಮಲ್ಲಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಮುದ್ದಣ್ಣ ಎಂ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಡಿ.ಎಲ್.ಎಸ್ ಪ್ರೇಮ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರಾದ ಬೈಲಾಂಜನಪ್ಪ ಪಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಲಕ್ಕಾ ಕೃಷ್ಣಾ ರೆಡ್ಡಿ, ವಕೀಲರ ಸಂಘದ ಅಧ್ಯಕ್ಷರು ಎಂ.ಆರ್ ಮುನಿರಾಜು ಉಪಸ್ಥಿತರಿರುವರು

ವಿಶೇಷ ಆಹ್ವಾನಿತರಾಗಿ ಬೆಂಗಳೂರು ಗ್ರಾಮಾಂತರ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಹರ್ಷವರ್ಧನ್ ಎಸ್ ಎಲ್, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ರಮೇಶ್ ಬಿ ಆರ್ ಹಾಗೂ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು,ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಮಿಕ ನಿರೀಕ್ಷಕರು, ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿರುತ್ತಾರೆ.

ಎಲ್&ಟಿ ಫೈನಾನ್ಸ್ ಲಿಮಿಟೆಡ್
(ಈ ಹಿಂದೆ ಎಲ್&ಟಿ ಫೈನಾನ್ಸ್ ಹೋಲ್ಡಿಂಗ್ಸ್ ಲಿಮಿಟೆಡ್)
ರಿಜಿಸ್ಟರ್ಡ್ ಆಫೀಸು: ಎಲ್&ಟಿ ಫೈನಾನ್ಸ್ ಲಿಮಿಟೆಡ್, ಬೃಂದಾವನ್ ಬಿಲ್ಡಿಂಗ್,
ಪ್ಲಾಟ್ ನಂ. 177, ಕಲೀನಾ, ಸಿಎಸ್‌ಟಿ ರೋಡ್, ಮರ್ಸಿಡಿಸ್ ಶೋರೂಮ್‌ನ ಸಮೀಪ,
ಸಾಂತಾಕ್ರೂಜ್ (ಪೂರ್ವ), ಮುಂಬಯಿ 400098.
CIN No.: L67120MH2008PLC181833
ಶಾಖೆ ಆಫೀಸ್: ಬೆಂಗಳೂರು

L&T Finance

ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಬಹಿರಂಗ ಹರಾಜು

ಎಲ್&ಟಿ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಕಂಪನಿಗೆ ಕೊಡಬೇಕಾದ ಬಾಕಿಗಳು ಮತ್ತು ಮುಂದಿನ ಬಡ್ಡಿ, ಚಾರ್ಜುಗಳು ಮತ್ತು ಖರ್ಚುಗಳು ಇತ್ಯಾದಿಯ ವಸೂಲಿಗಾಗಿ, ಸೆಕ್ಯುರಿಟೈಸೇಶನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ [2002ರ 54] ಅಡಿಯಲ್ಲಿ ಮತ್ತು ಸದರಿ ಕಾಯಿದೆಯು ನೀಡುವ ಅಧಿಕಾರವನ್ನು ಚಲಾಯಿಸುತ್ತಾ, ಈ ಕೆಳಗಿನ ಪ್ರಾಪರ್ಟಿಯನ್ನು **''ಎಲ್ಲಿದೆಯೋ ಹೇಗಿದೆಯೋ ಆಧಾರದ ಮೇಲೆ''** ಮತ್ತು **''ಹೇಗಿದೆಯೋ ಯಾವ ಸ್ಥಿತಿಯಲ್ಲಿದೆಯೋ''** ಆಧಾರದ ಮೇಲೆ, **''ಸಾರ್ವಜನಿಕ ಇ-ಹರಾಜು''** ವಿಧಾನದ ಮೂಲಕ ಹರಾಜು ಮಾಡುತ್ತಿದ್ದಾರೆ.

ಸಾಲಗಾರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಯೂರ್ಡ್ ಪ್ರಾಪರ್ಟಿಯ ವಿಳಾಸ	ಲೋನ್ ಅಕೌಂಟ್ ನಂಬರ್ (ಗಳು)	ಸ್ವಾಧೀನ ಪಡೆಸಿಕೊಂಡ ತಾರೀಖು	ಮುಂಗಡ ಹಣ 10% ಅಥವಾ ಆರ್‌ಪಿಯಲ್ಲಿ ಯಾವುದು ಹೆಚ್ಚೊ ಅದು (ರೂ ಗಳಲ್ಲಿ)	10/02/2024 ದಿನಾಂಕದ ಬೇಡಿಕೆ ನೋಟೀಸ್ ಪ್ರಕಾರ ಬಾಕಿ ಇರುವ ಒಟ್ಟು ಮೊತ್ತ	ರಿಜರ್ವ್ ಬೆಲೆ (ರೂ. ಗಳಲ್ಲಿ)	ಇನ್‌ಸ್ಪೆಕ್ಷನ್‌ನ ತಾರೀಖು	ಹರಾಜಿನ ತಾರೀಖುಮತ್ತು ಸಮಯ
1. ಗೀತಾ ಡಿ 2. ಆದಿ ನಾರಾಯಣ್ ಎನ್.ಜೆ 3. ಮೆಸರ್ಸ್ ಆದಿ ಬ್ಲಾಸಮ್ಸ್ ಫ್ಲೋರ್ಸ್ ಪ್ರೈವೇಟ್ ಲಿಮಿಟೆಡ್. (ಅದರ ಅಧಿಕೃತ ಸಹಿದಾರ ಗೀತಾ ಡಿ ಮೂಲಕ)	ಈ ಆಸ್ತಿಯು ಚಂದ್ರಶೇಖರಪುರ ಗ್ರಾಮ, ಬೇಗೂರು ಹೋಬಳಿಯ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು, ಕರ್ನಾಟಕ – 560068 ರ ಸರ್ವೆ ನಂ. 14, 16, 18, 19 ಮತ್ತು 20 ರಲ್ಲಿ ಹಾಗೂ ಯಲಹಳ್ಳಿ ಗ್ರಾಮದ ಸರ್ವೆ ನಂ. 52/1 ರಲ್ಲಿ ಪ್ರೆಸ್ಟೀಜ್ ಸಾಂಗ್ ಆಫ್ ದಿ ಸೌತ್ ನಲ್ಲಿ ಅಭಿವೃದ್ಧಿಪಡಿಸಲಾಗಿರುವ ವಸತಿ ಅಪಾರ್ಟ್ಮೆಂಟ್ ಆಗಿದೆ. ಇದು ಕಟ್ಟಡದ ಟವರ್/ಬ್ಲಾಕ್-17, ಬಿ7 ನಲ್ಲಿರುವ 19ನೇ ಮಹಡಿಯ ಅಪಾರ್ಟ್ಮೆಂಟ್ ಸಂಖ್ಯೆ 17192 ಆಗಿದೆ. ಈ ಫ್ಲಾಟ್ 977 ಚದರ ಅಡಿ ಕಾರ್ಪೆಟ್ ವಿಸ್ತೀರ್ಣ ಮತ್ತು 1376 ಚದರ ಅಡಿ ಅವಿಭಜಿತ ಸೂಪರ್ ಬಿಲ್ಟ್-ಅಪ್ ವಿಸ್ತೀರ್ಣವನ್ನು ಹೊಂದಿದೆ. ಇದು ಕಾರಿಡಾರ್‌ಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಇತರ ಸಾಮಾನ್ಯ ಬಳಕೆಯ ಪ್ರದೇಶಗಳಂತಹ ಎಲ್ಲಾ ಸಾಮಾನ್ಯ ಪ್ರದೇಶಗಳಲ್ಲಿನ ಅನುಪಾತದ ಪಾಲನ್ನು ಒಳಗೊಂಡಿದೆ. ಜೊತೆಗೆ, ನೆಲಮಾಳಿಗೆಯಲ್ಲಿ ಒಂದು ಕಾರ್ ಪಾರ್ಕಿಂಗ್ ಸ್ಥಳವೂ ಇದರೊಂದಿಗೆ ಇರುತ್ತದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	H09605190721112241 / H09605100721113925 / H09605100721113925L	ಮಾರ್ಚ್ 6, 2025	ರೂ. 11,53,950/-	05/02/2024 ರಂತೆ ರೂ. 1,46,96,820.72/-	ರೂ. 1,15,39,500/-	ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ, ಪೂರ್ವಾನುಮತಿ ಯೊಂದಿಗೆ.	ಜುಲೈ 14, 2025 ರಂದು ಮಧ್ಯಾಹ್ನ 12:30 ರಿಂದ ಮಧ್ಯಾಹ್ನ 2:00 ರವರೆಗೆ.
1. ಗೀತಾ ಡಿ 2. ಆದಿ ನಾರಾಯಣ್ ಎನ್.ಜೆ 3. ಮೆಸರ್ಸ್ ಆದಿ ಬ್ಲಾಸಮ್ಸ್ ಫ್ಲೋರ್ಸ್ ಪ್ರೈವೇಟ್ ಲಿಮಿಟೆಡ್. (ಅದರ ಅಧಿಕೃತ ಸಹಿದಾರ ಗೀತಾ ಡಿ ಮೂಲಕ)	ಈ ಆಸ್ತಿಯು ಚಂದ್ರಶೇಖರಪುರ ಗ್ರಾಮ, ಬೇಗೂರು ಹೋಬಳಿಯ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು, ಕರ್ನಾಟಕ – 560068 ರ ಸರ್ವೆ ನಂ. 14, 16, 18, 19 ಮತ್ತು 20 ರಲ್ಲಿ ಹಾಗೂ ಯಲಹಳ್ಳಿ ಗ್ರಾಮದ ಸರ್ವೆ ನಂ. 52/1 ರಲ್ಲಿ ಪ್ರೆಸ್ಟೀಜ್ ಸಾಂಗ್ ಆಫ್ ದಿ ಸೌತ್ ನಲ್ಲಿ ಅಭಿವೃದ್ಧಿಪಡಿಸಲಾಗಿರುವ ವಸತಿ ಅಪಾರ್ಟ್ಮೆಂಟ್ ಆಗಿದೆ. ಇದು ಕಟ್ಟಡದ ಟವರ್/ಬ್ಲಾಕ್-17, ಬಿ7 ನಲ್ಲಿರುವ 17ನೇ ಮಹಡಿಯ ಅಪಾರ್ಟ್ಮೆಂಟ್ ಸಂಖ್ಯೆ 12172 ಆಗಿದೆ. ಈ ಫ್ಲಾಟ್ 450 ಚದರ ಅಡಿ ಕಾರ್ಪೆಟ್ ವಿಸ್ತೀರ್ಣ ಮತ್ತು 644 ಚದರ ಅಡಿ ಸೂಪರ್ ಬಿಲ್ಟ್-ಅಪ್ ವಿಸ್ತೀರ್ಣವನ್ನು ಹೊಂದಿದೆ (ಇದು ಕಾರಿಡಾರ್‌ಗಳು, ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಇತರ ಸಾಮಾನ್ಯ ಬಳಕೆಯ ಪ್ರದೇಶಗಳಂತಹ ಎಲ್ಲಾ ಸಾಮಾನ್ಯ ಪ್ರದೇಶಗಳಲ್ಲಿನ ಅನುಪಾತದ ಪಾಲನ್ನು ಒಳಗೊಂಡಿದೆ), ಜೊತೆಗೆ, ನೆಲಮಾಳಿಗೆಯಲ್ಲಿ ಒಂದು ಕಾರ್ ಪಾರ್ಕಿಂಗ್ ಸ್ಥಳವೂ ಇದರೊಂದಿಗೆ ಇರುತ್ತದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	H09605190721112241 / H09605100721113925 / H09605100721113925L	ಮಾರ್ಚ್ 6, 2025	ರೂ. 5,50,050/-	05/02/2024 ರಂತೆ ರೂ. 1,46,96,820.72/-	ರೂ. 55,00,500/-	ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ, ಪೂರ್ವಾನುಮತಿ ಯೊಂದಿಗೆ.	ಜುಲೈ 14, 2025 ರಂದು ಮಧ್ಯಾಹ್ನ 12:30 ರಿಂದ ಮಧ್ಯಾಹ್ನ 2:00 ರವರೆಗೆ.

ಬಹಿರಂಗ ಹರಾಜಿನ ನಿಬಂಧನೆಗಳು ಮತ್ತು ಷರತ್ತುಗಳು

1. ಪಬ್ಲಿಕ್ ಇ-ಆಕ್ಷನ್ ಮೋಡ್ ನೆರವಿನಿಂದ ಮತ್ತು ಅದರ ಮೂಲಕ ಎಸ್‌ಎಆರ್‌ಎಫ್‌ಎಇಎಸ್‌ಐ SARFAESI ಕಾಯಿದೆಯ ಪ್ರಾವಧಾನಗಳ ಅಡಿಯಲ್ಲಿ ಕಂಪನಿಯ ಅಧಿಕೃತ ಅಧಿಕಾರಿಯವರು https://sarfaesi.auctiontiger.net/EPROC/ ವೆಬ್‌ಸೈಟ್ ಮೂಲಕ ಆನ್‌ಲೈನ್ ಆಗಿ ಇ-ಹರಾಜು ಮಾರಾಟವನ್ನು ನಡೆಸುತ್ತಿದ್ದಾರೆ.
2. ಬಹಿರಂಗ ಇ-ಹರಾಜನ್ನು ಇದರಲ್ಲಿ ಮೇಲೆ ನಮೂದಿಸಲಾಗಿರುವ ದಿನಾಂಕ ಮತ್ತು ಸಮಯದಲ್ಲಿ ನಡೆಸಲಾಗುವುದಿದ್ದು, ಆಗ ಮೇಲೆ ನಮೂದಿಸಲಾದ ಭದ್ರತೆ ಪಡೆದ ಆಸ್ತಿಯನ್ನು **''ಹೇಗಿದೆಯೊ ಎಲ್ಲಿದೆಯೊ'' ಆಧಾರದಲ್ಲಿ ಮತ್ತು ''ಹೇಗಿದೆಯೊ ಏನಿದೆಯೊ'' ಸ್ಥಿತಿಯಲ್ಲಿ** ಮಾರಾಟ ಮಾಡಲಾಗುತ್ತದೆ.
3. ಬಹಿರಂಗ ಇ-ಹರಾಜಿನಲ್ಲಿ ಭಾಗವಹಿಸುವುದಕ್ಕಾಗಿ, ಉದ್ದೇಶ ಹೊಂದಿರುವ ಖರೀದಿದಾರರು/ಬಿಡ್ಡರ್‌ಗಳು ಭದ್ರತೆ ಪಡೆದ ಆಸ್ತಿಗಳ ರಿಸರ್ವ್ ಬೆಲೆಯ 10% ಆಗಿರುವ ಮರುಪಾವತಿ ಮಾಡಲ್ಪಡಬಹುದಾದ ಮುಂಗಡ ಹಣ ಠೇವಣಿಯ ಪಾವತಿಯ ವಿವರಗಳನ್ನು ಪ್ಯಾನ್ ಕಾರ್ಡ್, ಕಂಪೆನಿಯ ಪ್ರಸಂಗದಲ್ಲಿ ಬೋರ್ಡ್ ರೆಸೊಲ್ಯೂಶನ್ ಮತ್ತು ವಿಳಾಸದ ರುಜುವಾತಿನ ಪ್ರತಿಗಳೊಂದಿಗೆ 12/07/2025 ರಂದು ಅಥವಾ ಮೊದಲು ಸಲ್ಲಿಸಬೇಕು.
4. ಸಾರ್ವಜನಿಕ ಇ-ಹರಾಜಿನಲ್ಲಿ ಯಶಸ್ವಿಯಾಗದ ಎಲ್ಲಾ ಇತರ ಬಿಡ್ಡರ್‌ಗಳ ಇಎಂಡಿಯನ್ನು ಸಾರ್ವಜನಿಕ ಇ-ಹರಾಜನ್ನು ಮುಗಿದ 7 ದಿನಗಳಲ್ಲಿ ಎಲ್‌ಟಿಎಫ್ ನಿಂದ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ.
5. ಯಶಸ್ವಿ ಖರೀದಿದಾರರು/ಬಿಡ್ಡರ್ ರು ಅವನ/ಅದರ ಆಫರ್‌ನ 25% (ಇಎಮ್‌ಡಿ ಒಳಗೊಂಡು)ಅನ್ನು ''ಎಲ್&ಟಿ ಫೈನಾನ್ಸ್ ಲಿಮಿಟೆಡ್'' ನ ಪರವಾಗಿ ಮುಂಬೈನಲ್ಲಿ ಪಾವತಿಯಾಗುವ ಡಿ.ಡಿ/ಪಿ.ಓ ದ ರೂಪದಲ್ಲಿ 14/07/2025ರಲ್ಲಿ ಅಂದರೆ ಹರಾಜಿನ ದಿನ 18.00 ಗಂಟೆಗೆ ಮೊದಲು ಅಥವಾ ಮುಂದಿನ ಕೆಲಸದ ದಿನ ಅಂದರೆ 15/07/2025 ರಲ್ಲಿ ಜಮಾ ಮಾಡತಕ್ಕದ್ದು ಆ ಠೇವಣಿಯು ಎಲ್&ಟಿ ಫೈನಾನ್ಸ್ ಲಿಮಿಟೆಡ್ ನಿಂದ ದೃಢೀಕರಿಸಲ್ಪಡಬೇಕು, ಅದಕ್ಕೆ ತಪ್ಪಿದರೆ ಮಾರಾಟವು ವಿಫಲವಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಸದರಿ ಯಶಸ್ವಿ ಬಿಡ್ಡರ್‌ರ ಇಎಮ್‌ಡಿ ಮುಟ್ಟುಗೋಲು ಹಾಕಲ್ಪಡುತ್ತದೆ. ಉಳಿದ ಮೊತ್ತ ಅಂದರೆ ಪಾವತಿ ಮಾಡಬೇಕಾದ ಖರೀದಿ ಬೆಲೆಯ 75% ಅನ್ನು ಖರೀದಿದಾರರು ಎಲ್&ಟಿ ಫೈನಾನ್ಸ್ ಲಿಮಿಟೆಡ್‌ಗೆ ಸ್ಥಿರಾಸ್ತಿಯ ಮಾರಾಟದ 15ನೇ ದಿನದಂದು ಅಥವಾ ಮೊದಲು ಅಥವಾ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ಅಂತಹ ವಿಸ್ತರಿತ ಅವಧಿಯೊಳಗೆ ಪಾವತಿ ಮಾಡಬೇಕು.
6. ಆಸ್ತಿ ಪರಿಶೀಲನೆಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ, ಸಂಭಾವ್ಯ ಬಿಡ್ಡಾರರು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು, **ಅಂದರೆ ಹೆಸರು - ಶ್ರೀ ಸತೀಶ್ ಆರ್, ಮತ್ತು ಸಂತೋಷ್ ತಿವಾರಿ, ಎಲ್ ಟಿ ಫೈನಾನ್ಸ್, 2 ನೇ ಮಹಡಿ, ಸಿಟಿ ಸೆಂಟರ್, 79/2, ಹೆಬ್ಬಾಳ ರಿಂಗ್ ರಸ್ತೆ, ಹೆಬ್ಬಾಳ, ಬೆಂಗಳೂರು, ಕರ್ನಾಟಕ - 560024, ಸಂಪರ್ಕ ಸಂಖ್ಯೆ**. 0222-68076666. ಇ-ಹರಾಜಿನ ಯಾವುದೇ ಹಂತದಲ್ಲಿ, ಅಧಿಕೃತ ಅಧಿಕಾರಿಯು ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಬಿಡ್/ಆಫರ್ ಅನ್ನು ಸ್ವೀಕರಿಸಬಹುದು/ತಿರಸ್ಕರಿಸಬಹುದು/ಮಾರ್ಪಡಿಸಬಹುದು/ರದ್ದು ಮಾಡಬಹುದು ಅಥವಾ ಇ-ಹರಾಜನ್ನು ಮುಂದೂಡಬಹುದು.
7. ಯಶಸ್ವಿ ಖರೀದಿದಾರರು/ಬಿಡ್ಡರ್‌ರು ಅನ್ವಯವಿರುವ ಕಾನೂನಿನಿಗೆ ಅನುಸಾರವಾಗಿ ಅವನ/ಅವಳ /ಅದರ ಪರವಾಗಿ ಆಸ್ತಿಯ ಹಸ್ತಾಂತರ/ಒಪ್ಪಿಸುವಿಕೆಯ ಸಲುವಾಗಿ ಪಾವತಿ ಮಾಡುವ ಅಗತ್ಯವಿರುವ ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಫೀಜುಗಳು, ಸ್ಟಾಂಪ್‌ಡ್ಯೂಟಿ, ರಿಜಿಸ್ಟ್ರೇಶನ್ ಶುಲ್ಕಗಳು ಇತ್ಯಾದಿಗಳನ್ನು ಭರಿಸಬೇಕು.
8. ಸದರಿ ಸಲ್ಲತಕ್ಕ ಬಾಕಿಗಳಿಗೆ ಹೊಣೆಯಾಗಿರುವ ಸಾಲಗಾರರು/ಜಾಮೀನುದಾರರು ಈ ಮಾರಾಟದ ನೋಟೀಸನ್ನು ಮೇಲೆ ನಮೂದಿಸಲಾದ ಬಹಿರಂಗ ಇ-ಹರಜನ್ನು ನಡೆಸುವ ಕುರಿತು ಭದ್ರತೆಯ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ರ ಅಡಿಯಲ್ಲಿ ಇಂದು ನೋಟೀಸು ಎಂದು ಪರಿಗಣಿಸತಕ್ಕದ್ದು.
9. ಸಾಲ ಪಡೆದವರ(ರು)/ಸಹ-ಸಾಲ ಪಡೆದವ(ರು)/ಗ್ಯಾರಂಟರ್(ಗಳು)/ಮಾರ್ಟ್‌ಗೇಜರ್(ಗಳು), ಇವರಿಗೆ, ಮೇಲ್ಕಂಡ ಬಾಕಿ ಇರುವ ಹಣವನ್ನು ಪೂರ್ತಿಯಾಗಿ, ನೀಡಲಾಗಿರುವ ಇ-ಹರಾಜಿನ ದಿನಾಂಕದ ಮೊದಲೇ ತೀರಿಸಬೇಕಾಗಿ ಈ ಮೂಲಕ ವಿನಂತಿಸಲಾಗುತ್ತದೆ. ಇದಕ್ಕೆ ತಪ್ಪಿದಲ್ಲಿ SARFAESI ಆ್ಯಕ್ಟ್, 2002ಯಲ್ಲಿ ವಿಧಿಸಲಾಗಿರುವ ಅವಕಾಶಗಳ ಅನುಸಾರ ಪ್ರಾಪರ್ಟಿಯನ್ನು ಮಾರಲಾಗುತ್ತದೆ.
10. ಸಾಲ ಪಡೆದವರ(ರು)/ಸಹ-ಸಾಲ ಪಡೆದವ(ರು)/ಗ್ಯಾರಂಟರ್(ಗಳು)/ಮಾರ್ಟ್‌ಗೇಜರ್(ಗಳು), ಇವರನ್ನು, ಎಲ್&ಟಿ ಫೈನಾನ್ಸ್ ಲಿಮಿಟೆಡ್‌ನಿಂದ ಮುಂದಾಗಿ ಸಮ್ಮತಿಯನ್ನು ಪಡೆಯದೇ, ನೋಟಿಸಿನಲ್ಲಿ ಸೂಚಿಸಲಾಗಿರುವ ಜಾಮೀನಿನ ಸ್ವತ್ತನ್ನು ಮಾರಾಟ, ಲೀಸ್ ಅಥವಾ ಇನ್ನಿತರ ರೀತಿಯಲ್ಲಿ ಬೇರೆಯವರಿಗೆ ಹಸ್ತಾಂತರಿದಂತೆ ಪ್ರತಿಬಂಧಿಸಲಾಗಿದೆ.

ಸಹಿ ಮಾಡಲಾಗಿದೆ/-
ಅಧಿಕೃತ ಅಧಿಕಾರಿ
ಎಲ್&ಟಿ ಫೈನಾನ್ಸ್ ಲಿಮಿಟೆಡ್ ಪರವಾಗಿ

ದಿನಾಂಕ: 13.06.2025
ಸ್ಥಳ: ಬೆಂಗಳೂರು